ಅ) ಅದನ್ನು ವಾಪಸ್ಸು ಪಡೆದಿರುವ ಹಿನ್ನೆಲೆ ಏನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು

ಆ) ಮಳೆಗಾಲ ಮುಗಿದಿದ್ದು, ನದಿಯಲ್ಲಿ ಪ್ರವಾಹ ಇಲ್ಲದೇ ಇರುವ ಪ್ರಯುಕ್ತ ನಂಜಾರು ಗ್ರಾಮದ ದೋಣಿಯನ್ನು ವಾಪಸ್ಸು ಪಡೆಯಲಾಗಿರುತ್ತದೆ.

ವಿದ್ಯುಚ್ಛಕ್ತಿ ಕಡಿತದಲ್ಲಿ ತಾರತಮ್ಯ

687 - ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಕಡಿತವನ್ನು ರಾಜ್ಯದ ಬೇರೆ ತಾಲ್ಲೂಕುಗಳಿಗೆ ಹೋಲಿಸಿದಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ತಾರತಮ್ಯ ಮಾಡಲು ಕಾರಣವೇನು?

ಇ) ವಿದ್ಯುಚ್ಛಕ್ತಿ ಇಲಾಖೆಯ ವಿದ್ಯುತ್ ಕಡಿತದ ತಾರತಮ್ಯ ನೀತಿಯನ್ನು ವಿದ್ಯಾರ್ಥಿಗಳು ಬಳಕೆದಾರರು, ಸಂಘಸಂಸ್ಥೆಗಳು ಪ್ರತಿಭಟಿಸಿರುವುದು.

ಈ) ಇದನ್ನು ಸರಿಪಡಿಸಲು ಸರ್ಕಾರ ಏನು ಕ್ರಮಸ ಕೈಗೊಂಡಿದೆ.

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಲ್ಲ

ಇ) ಮತ್ತು ಈ) ಮುಂಗಾರು ಮಳೆಯ ವಿಫಲತೆಯಿಂದಾಗಿ ಮತ್ತು ರಾಜ್ಯವು ತೀವ್ರ ರೀತಿಯಲ್ಲಿ ವಿದ್ಯುಚ್ಛಕ್ತಿ ಅಭಾವವನ್ನು ಎದುರಿಸುತ್ತದೆ. ಆದ್ದರಿಂದ ಮಂಡಳಿಯು ರಾಜ್ಯದ ಎಲ್ಲೆಡೆ ನಿಯಮಿತ ಮತ್ತು ಕೆಲವೊಮ್ಮೆ ಅನಿಯಮಿತ ಲೋಡ್ ಷಡ್ಡಿಂಗನ್ನು ನಿರ್ವಹಿಸುವುದು ಅನಿವಾರ್ಯವಾಗಿದೆ. ಸಾರ್ವಜನಿಕರು ಈ ವಿಷಯದಲ್ಲಿ ಮಂಡಳಿಯೊಡನೆ ಸಹಕರಿಸಬೇಕಾಗಿದೆ.

ಗ್ರಾಮ ಪಂಚಾಯಿತಿಗಳಿಗೆ ಇರುವ ಎಲ್ಲಾ ಅಧಿಕಾರಿಗಳನ್ನು ತಾಲ್ಲೂಕು ಪಂಚಾಯಿತಿಗಳಿಗೆ ಕೊಟ್ಟಿರುವುದರ ಬಗ್ಗೆ

612 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯ್ತಿಗಳಿಗೆ ಇದ್ದ ಕೆಲವು ಮುಖ್ಯ ಅಧಿಕಾರಗಳನ್ನು ಇತ್ತೀಚೆಗೆ ತಾಲ್ಲೂಕು ಪಂಚಾಯ್ತಿಗಳಿಗೆ ಹಸ್ತಾಂತರಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ತಡೆಗಟ್ಟಲು ಗೆದ್ದು ಕೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.